## SECTION — A / ವಿಭಾಗ — A

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

1. ಈ ಕೆಳಗಿನ ವಿಷಯವನ್ನು ಕುರಿತು 300 ಪದಗಳಿಗೆ ಮೀರದಂತೆ ಪ್ರಬಂಧ ರಚಿಸಿ. [25]

ಸಮಯದ ಬೆಲೆ

2. ಈ ಕೆಳಗಿನ ಕಥೆಯನ್ನು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರ ಬರೆಯಿರಿ.

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

**To be used by the Evaluator only**

1988 ರಲ್ಲಿ ಪೃಥ್ವಿ ಉಡಾವಣೆಗೆ ಪೂರ್ವಭಾವಿ ಸಿದ್ಧತೆಗಳು ಹೈದರಾಬಾದಿನ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಪ್ರಯೋಗಾಲಯದಲ್ಲಿ ನಡೆಯುತ್ತಿದ್ದವು. ಇದರ ನಿರ್ದೇಶಕರು ವಿ.ಜೆ. ಸುಂದರಮ್, ಕೆಲಸಗಳು ತಡವಾದಕ್ಕೆ ಸಬೂಬುಗಳನ್ನು ಹೇಳುತ್ತಾ ತಮ್ಮನ್ನು ಕೆಲವರು ಸಮರ್ಥಿಸಿಕೊಳ್ಳುತ್ತಿದ್ದರು. ಆ ದಿನದ ಪತ್ರಿಕೆಯನ್ನು ಕೈಯಲ್ಲಿ ಹಿಡಿದು ಕಲಾಂ ಸಭೆ ನಡೆಯುತ್ತಿದ್ದ ಸ್ಥಳಕ್ಕೆ ಬಂದರು.

ಸಿಕಂದರಾಬಾದಿನ ಶಾಲಾ ಬಾಲಕಿಯೊಬ್ಬಳು ತಯಾರಿಸಿದ್ದ ಪೃಥ್ವಿ ಕ್ಷಿಪಣಿಯ ಮಾದರಿಯ ಚಿತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಉಪನಿರ್ದೇಶಕ ಸಾರಸ್ವತ ಹೆಮ್ಮೆಯಿಂದ ಹೇಳಿದರು: "ಈ ಬಾಲಕಿ, ನಮ್ಮ ಕ್ಷಿಪಣಿಯ ಆಕಾರ, ಗಾತ್ರ ಕುರಿತು ಒಂದಷ್ಟು ವಿವರ ಕೇಳಿದ್ದಳು. ನಾನು ಮಾಹಿತಿ ನೀಡಿದ್ದೆ. ನೋಡಿ ಎಂಥ ಅದ್ಭುತ ಮಾದರಿ ತಯಾರಿಸಿದ್ದಾಳೆ."

"ಹಾಗಾದರೆ, ಆ ಹುಡುಗಿಯನ್ನು ಇಲ್ಲಿಗೆ ಯಾಕೆ ಕರೆಸಬಾರದು? ಆ ಮಗು ನಿಜವಾದ ಪೃಥ್ವಿ ಕ್ಷಿಪಣಿ ನೋಡಲಿ, ಒಂದು ದಿನ ನಿಮ್ಮ ಅತಿಥಿಯಾಗಿರಲಿ" ಅಬ್ದುಲ್ ಕಲಾಂ ಅವರು ಥಟ್ಟನೆ ಸಲಹೆ ಮಾಡಿದರು.

ಮುಂದೆ ಆ ಹುಡುಗಿಯನ್ನು ಇಲಾಖೆಯ ಕಾರಿನಲ್ಲಿ ಕರೆದುಕೊಂಡು ಹೋಗಿ ಪೃಥ್ವಿಯನ್ನು ತೋರಿಸಿದರು. ಕ್ಷಿಪಣಿಯ ಮೈ ಸವರಿದ ಆ ಮಗುವಿನ ಮನಸ್ಸಿನಲ್ಲಿ ಏನೆಲ್ಲ ಭಾವನೆಗಳು ಮೂಡಿದವೊ, ಯಾರು ತಾನೆ ಹೇಳಬಲ್ಲರು! ಕ್ಯಾಂಟೀನಿನಲ್ಲಿ ತಂತ್ರಜ್ಞರೊಡನೆ ಸಹಭೋಜನ, ಮೀಟಿಂಗ್ ಮಧ್ಯದಲ್ಲಿಯೇ ಹೊರಕ್ಕೆ ಬಂದ ಕಲಾಂ ಅವರು, "ನೀನು ಯಾವ ಸ್ಕೂಲಿನಲ್ಲಿ ಓದುತ್ತಿದ್ದೀಯೆ, ನಿಮ್ಮ ತಂದೆ ಏನು ಮಾಡುತ್ತಿದ್ದಾರೆ? ನಿನ್ನ ಹವ್ಯಾಸಗಳೇನು? ಎಂದು ನಗುತ್ತಾ ಕೇಳಿದಾಗ ಹುಡುಗಿಗಾದ ಆನಂದ ಹೇಳತೀರದು.

ಚೆನ್ನೈನಲ್ಲಿ ಪದ್ಮಶೇಷಾದ್ರಿ ಬಾಲಭವನದ ಪ್ರೌಢಶಾಲೆಯಲ್ಲಿ ಕ್ವಿಜ್ ಕಾರ್ಯಕ್ರಮ. ಕ್ವಿಜ್ ಮಾಸ್ಟರ್ ಭಾರತದಲ್ಲಿ ಕ್ಷಿಪಣಿ ಮನುಷ್ಯ ಅಬ್ದುಲ್ ಕಲಾಂ. ಏನೆಲ್ಲಾ ಪ್ರಶ್ನೆ ಕೇಳಬಹುದು ಅಂತ ವಿದ್ಯಾರ್ಥಿಗಳಿಗೆ ಕಾತುರ. ಕಲಾಂ ಅವರ ಪ್ರಶ್ನೆ ಹೀಗಿತ್ತು. "ಭೂಮಿ ಸೂರ್ಯನನ್ನು ಪರಿಭ್ರಮಿಸಲು ಒಂದು ವರ್ಷ ತೆಗೆದುಕೊಳ್ಳುತ್ತದೆ. ಹಾಗಿದ್ದಲ್ಲಿ ಹದಿನೈದನೇ ಪರಿಭ್ರಮಣ ಪಥದಲ್ಲಿದ್ದ ವ್ಯಕ್ತಿಗೆ ಎಷ್ಟು ವಯಸ್ಸಾಗಿರುತ್ತದೆ?" ಈ ಪ್ರಶ್ನೆ ಕೇಳಿದ ಅನೇಕ ಮಕ್ಕಳು ತಬ್ಬಿಬ್ಬಾಗಿದ್ದರು. ಅಭಿಷೇಕ ಎಂಬ ಹುಡುಗ ಸ್ವಲ್ಪ ಯೋಚಿಸಿ, 'ಹದಿನಾಲ್ಕು' ಎಂದು ಉತ್ತರಿಸಿದ. ಉತ್ತರ ಸರಿಯಾಗಿತ್ತು. ಭೂಮಿಯ ಮೇಲೆ ನಿಂತಿದ್ದ ವ್ಯಕ್ತಿ ಹದಿನಾಲ್ಕು ಸುತ್ತು ಮುಗಿಸಿರುತ್ತಾನೆ ಅಲ್ಲವೆ? ಕಲಾಂ ಅವರು ತಮ್ಮ ವಯಸ್ಸನ್ನು ಹೇಳುತ್ತಿದ್ದುದೂ ಹೀಗೆಯೆ. ಕಲಾಂ ಅವರು ಇದ್ದ ಮನೆಯ ಮುಂದೆ ಪುಟ್ಟ ಮಕ್ಕಳ ಹಿಂಡು ಯಾವಾಗಲೂ ಇರುತ್ತಿತ್ತು. ಗಹನವಾದ ವಿಷಯಗಳನ್ನು ಪುಟ್ಟ ಕಥೆಗಳ ರೂಪದಲ್ಲಿ ಹೇಳುತ್ತಾ, 'ಕಲಾಂ ಮೇಷ್ಟ್ರು' ಬದುಕಿನ ಸಾರ್ಥಕತೆ ಮರೆಯುತ್ತಿದ್ದರು.

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

ಮಕ್ಕಳನ್ನು ಹತ್ತಿರ ಕೂರಿಸಿಕೊಂಡು ತಮ್ಮ ನೆನಪಿನ ಬುತ್ತಿ ಬಿಚ್ಚಿ ಅವರಿಗೆ ಉಣಬಡಿಸುತ್ತಿದ್ದರು. ''ನಮಗೆ ತಿಳಿದಿರಲಿ ಬಿಟ್ಟಿರಲಿ, ನಾವೆಲ್ಲ ಎಳೆಯರಾಗಿದ್ದಾಗಿನಿಂದ ಬದುಕಿನ ಅನೇಕ ಮಜಲುಗಳಲ್ಲಿ ಯಾರನ್ನಾದರೂ ಆದರ್ಶ ವ್ಯಕ್ತಿಗಳಾಗಿರಿಸಿಕೊಂಡೇ ಬೆಳೆದಿರುತ್ತೇವೆ. ನೀವು ಬೆಳೆಯುತ್ತಿರುವಾಗ, 15 ವರ್ಷ ತಲುಪುವವರೆಗೆ, ನಿಮಗೆ ತಾಯಿ, ತಂದೆ ಮತ್ತು ಶಾಲಾ ಶಿಕ್ಷಕರು ಆದರ್ಶ ಮಾದರಿಗಳು. ಆ ವಯಸ್ಸಿನಲ್ಲಿ ಮಾರ್ಗದರ್ಶನ ಮಾಡಲು ಅವರು ಅತ್ಯಂತ ಸಮರ್ಥರು. ನಾನು ಚಿಕ್ಕವನಾಗಿದ್ದಾಗ ನನ್ನ ಅಮ್ಮ, ಅಪ್ಪ ದಿನದಲ್ಲಿ ಐದು ಬಾರಿ ನಮಾಜ್ ಸಲ್ಲಿಸುತ್ತಿದ್ದುದನ್ನು ನೋಡಿದ್ದೆ. ಅವರೇನೂ ಶ್ರೀಮಂತರಲ್ಲ. ಆದರೂ ಅವರು ಹಸಿದವರಿಗೆ ಉಣಬಡಿಸುತ್ತಿದ್ದರು. ಬಡವರಿಗೆ ಸಹಾಯ ಹಸ್ತ ಚಾಚುತ್ತಿದ್ದರು. ಹಣದ ಅಡಚಣೆಯ ನಡುವೆಯೂ ನನ್ನನ್ನು ಶಾಲೆಗೆ ಕಳಿಸುವಂತೆ ಅಪ್ಪನನ್ನು ಪ್ರೇರೇಪಿಸಿದವರು ಶಿವಸುಬ್ರಮಣ್ಯ ಅಯ್ಯರ್. ಮಕ್ಕಳನ್ನು ಬುದ್ಧಿವಂತರೂ ಮತ್ತು ಕಷ್ಟಪಟ್ಟು ಕೆಲಸ ಮಾಡುವಂತಹವರೂ ಆದ ಉತ್ತಮ ಮನುಷ್ಯರನ್ನಾಗಿ ಮಾಡುವುದು ತಂದೆತಾಯಿಯರ ಆದ್ಯ ಕರ್ತವ್ಯ. ಅಧ್ಯಾಪಕರು ಕಲಿಕೆ ಮತ್ತು ಜ್ಞಾನದ ಬೆಳಕನ್ನು ಮಕ್ಕಳಿಗೆ ನೀಡುವ ಕಿಟಕಿಗಳು, ಮಕ್ಕಳಲ್ಲಿ ಕ್ರಿಯಾಶೀಲತೆ ಮೊಳೆಯುವಂತೆ ಮಾಡುವ ಆದರ್ಶ ವ್ಯಕ್ತಿಗಳು. ತಾಯಿ, ತಂದೆ, ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ. ಆ ಮೂವರೂ ಶ್ರದ್ಧೆಯಿಂದ ದುಡಿದಾಗ ಮಾತ್ರ ಭಾರತಕ್ಕೆ ಹೊಸ ತಾರುಣ್ಯ ಬರುತ್ತದೆ. ಮಾತಾಪಿತೃಗಳ ಹಿಂದೆ ಶಾಲೆ ಮತ್ತು ಶಿಕ್ಷಕರ ಹಿಂದೆ ಮನೆ ಇರುತ್ತದೆ. ವಿದ್ಯಾಭ್ಯಾಸ ಹಾಗೂ ಶಿಕ್ಷಕ–ವಿದ್ಯಾರ್ಥಿ ಸಂಬಂಧಗಳನ್ನು ವ್ಯಾಪಾರಿ ಮನೋಭಾವದಿಂದ ನೋಡಬಾರದು, ರಾಷ್ಟ್ರಾಭಿವೃದ್ಧಿಯೇ ಮುಖ್ಯಗುರಿಯಾಗಿರಬೇಕು. ಸರಿಯಾದ ಶಿಕ್ಷಣ ನಮ್ಮ ಯುವಕರಲ್ಲಿ ಆತ್ಮಗೌರವ ಮತ್ತು ಘನತೆಗಳನ್ನು ಪೋಷಿಸುತ್ತದೆ. ಯಾವುದೇ ಕಾನೂನು ಒತ್ತಡದಿಂದ ಈ ಗುಣಗಳನ್ನು ಬೆಳೆಸಲಾರದು. ಇವುಗಳನ್ನು ನಾವೇ ಪೋಷಿಸಿಕೊಳ್ಳಬೇಕು'' ಕಲಾಂ ಅವರ ಮಾತು ಚೆಣ್ಣರಿಗೆ ಅರ್ಥವಾಗಿತ್ತು.

ಮತ್ತೊಬ್ಬ ಹುಡುಗ ಪ್ರಶ್ನಿಸಿದ, ''ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರಾಗಿರಬಹುದು? ದಯವಿಟ್ಟು ಹೇಳಿ'' ಕಲಾಂ ಹೇಳಿದರು, ''ನನಗನ್ನಿಸುತ್ತೆ, ವಿಜ್ಞಾನ ಹುಟ್ಟಿದ್ದು ಮತ್ತು ಈಗಲೂ ಜೀವಂತವಾಗಿರುವುದು ಪ್ರಶ್ನೆಗಳಿಂದ. ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು. ಕೊನೆಯಿಲ್ಲದಷ್ಟು ಪ್ರಶ್ನೆಗಳನ್ನು ಕೇಳುವವರು ಮಕ್ಕಳೇ ಎಂಬುದು ಪೋಷಕರಿಗೂ ಮತ್ತು ಶಿಕ್ಷಕರಿಗೂ ಚೆನ್ನಾಗಿ ಗೊತ್ತಿದೆ. ಆದ್ದರಿಂದ ''ಮಗುವೇ ಮೊದಲ ವಿಜ್ಞಾನಿ'' ಮಕ್ಕಳಿಗೆ ಉತ್ತರ ಹಿಡಿಸಿತ್ತು. ಚಪ್ಪಾಳೆ ತಟ್ಟಿ ಸಮ್ಮತಿ ಸೂಚಿಸಿದರು. ನೆರೆದಿದ್ದ ಶಿಕ್ಷಕರು ಮತ್ತು ತಾಯಿ ತಂದೆಯರು ಮುಗುಳ್ನಕ್ಕರು.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. [5 × 5 = 25]

(a) ಕಲಾಂ ರವರ ಬದುಕಿನ ಮಂತ್ರ ಯಾವುದು?

ಉತ್ತರ:

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

**(b)** ಕಲಾಂರವರು ತಾವು ಆತ್ಮಕತೆ ಬರೆದದ್ದು ಏತಕ್ಕಾಗಿ?

ಉತ್ತರ: ______________________________

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

**To be used by the Evaluator only**

(c) ಕಲಾಂರವರು ಬಂಡೆಗಳ ಬಸಿರಲ್ಲಿ ಕಂಡದ್ದೇನು?

ಉತ್ತರ:

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

**To be used by the Evaluator only**

**(d)** ವಿ.ಜೆ. ಸುಂದರಮ್ ಸಿಕಂದರಾಬಾದ್ ಶಾಲಾ ಬಾಲಕಿ ಬಗೆಗೆ ಹೇಳಿದ ಹೆಮ್ಮೆಯ ಮಾತುಗಳಾವುವು?

ಉತ್ತರ: ______

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

**To be used by the Evaluator only**

(e) ಕಲಾಂರವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ?

ಉತ್ತರ:

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

3. ಸಂಕ್ಷಿಪ್ತ ಲೇಖನ (Précis Writing)

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

ಸುಮಾರು 100 ಶಬ್ದಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ.

[25]

ಕಥಾನಾಯಕ ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ. ಗೇಯುವುದನ್ನು ನಾಲ್ಕು ದಿನ ತಡಮಾಡಿದರೆ ಕುಳ ನೆಲದಲ್ಲಿ ನಾಟುವುದಿಲ್ಲ. ಆದರೆ ಇರುವ ಎರಡು ಎತ್ತುಗಳಲ್ಲಿ ಒಂದು ನೊಗ ಇಟ್ಟೊಡನೆ ಮಲಗಿಬಿಡುತ್ತದೆ. ಎಷ್ಟು ಹೊಡೆದರೂ ಏಳುವುದಿಲ್ಲ. ಇನ್ನೊಂದು ಕೂಡ ತನ್ನ ಸಹೋದ್ಯೋಗಿಯಂತೆಯೇ ಆಗಿಬಿಡುವ ಸೂಚನೆಗಳಿವೆ. ಮಲಗಿದ್ದು ಒಂದು ಏಟು ಕೊಟ್ಟೊಡನೆ ಏಳುತ್ತದೆ. ಜೊತೆಗಾರ ಏಳುವುದನ್ನೇ ಕಾದು ಕೆಲಸವಿಲ್ಲದ ಬಗ್ಗೆ ಖುಷಿಗೊಳ್ಳುವಂತೆ ಕಂಡುಬರುತ್ತದೆ. ಆದ್ದರಿಂದ ಬಸಲಿಂಗ ಎರಡೂ ಎತ್ತುಗಳನ್ನು ಯಾರಾದರೊಬ್ಬರಿಗೆ ಸಾಟಿಯಲ್ಲಿ ಕೊಟ್ಟು ಹೊಸ ಎತ್ತುಗಳನ್ನು ಹೊಂಚಿಕೊಳ್ಳಬೇಕು. ಮಗುವಿಗೆ ಮೈಯಲ್ಲಿ ಸರಿಯಿಲ್ಲ. ಶಿವನೂರು ಸ್ವಾಮಿಗಳಿಗೆ ತೋರಿಸಬೇಕು ಎಂದು ಹೆಂಡ್ತಿ ಸಿದ್ಲಿಂಗಿ ಹೇಳುತ್ತಲೇ ಇದ್ದಾಳೆ. ಮಗುವಿನ ಕೆಮ್ಮು ಹೋಗುತ್ತಲೇ ಇಲ್ಲ. ಈ ನಡುವೆ ಬಸಲಿಂಗನಿಗೆ ಇನ್ನೊಂದು ತೊಂದರೆ ಕಾಣಿಸಿಕೊಂಡಿತು. ಈ ತೊಂದರೆ ತನ್ನನ್ನು ಇಷ್ಟೊಂದು ಗಾಸಿಗೊಳಿಸೀತೆಂದು ಬಸಲಿಂಗ ಊಹಿಸಿರಲಿಲ್ಲ. ತನ್ನ ಮಲಗುವ ಎತ್ತುಗಳನ್ನು ಸಾಟಿ ಮಾಡಲು ಹೇಳಬೇಕಾದ ಸುಳ್ಳು ಅವನ ತಲೆ ತಿನ್ನತೊಡಗಿತ್ತು. ಸುಳ್ಳು ಹೇಳಲು ಬೇಕಾದ ಛಾತಿ, ಮಾತುಗಾರಿಕೆ ಅವನಲ್ಲಿರಲ್ಲಿಲ್ಲ. ಎತ್ತುಗಳ ಬಗ್ಗೆ ಹೇಳಲು ಒಳ್ಳೆಯದನ್ನು ಲೆಕ್ಕ ಹಾಕಿದಂತೆಲ್ಲ ತಲೆ ಬಿಸಿಯಾಗುತ್ತಿತ್ತು. ಅದೇನೆ ಆದರೂ ಈ ಸಮಯದಲ್ಲಿ ಬಸಲಿಂಗನ ಎಡಗಣ್ಣಲ್ಲಿ ಕಾಣಿಸಿಕೊಂಡ ನೋವು ಹೆಚ್ಚಾಗುತ್ತಲೇ ಹೋಯಿತು.

ಮೊದಮೊದಲು ಅದು ಕಣ್ಣುಬೇನೆ ಇರಬಹುದೆಂದು ತಿಳಿದ. ಆದರೆ ಕಣ್ಣು ಕೆಂಪಾಗಲಿಲ್ಲ. ಕಣ್ಣಿನ ಸುತ್ತ ನೋವು ಮಾತ್ರ ಹೆಚ್ಚಾಯಿತು. ಈ ನೋವು ಬಲಗಣ್ಣಿನಲ್ಲಿರಲಿಲ್ಲ. ಎಡಗಣ್ಣು ನೋವಿನೊಂದಿಗೆ ಸ್ವಲ್ಪ ಮಂದವಾಗುತ್ತಿದ್ದಂತೆ ಅನ್ನಿಸತೊಡಗಿತು. ಹೆದರಿಕೆ ಶುರುವಾಯಿತು. ನಗರದ ತನ್ನ ಎಂದಿನ ವೈದ್ಯರಿಗೆ ತೋರಿಸಿದ. ಅವರು ನೋವಿನ ವಿವರಗಳನ್ನೆಲ್ಲ ಕೇಳಿ ರೆಪ್ಪೆ ಅಗಿಲಿಸಿ ನೋಡಿದರು. ಅವರಿಗೆ ಅರ್ಥವಾಗದಿದ್ದರೂ ಬಸಲಿಂಗನಿಗೆ ಧೈರ್ಯ ತುಂಬಲು ಒಳ್ಳೊಳ್ಳೆಯ ಮಾತನಾಡಿದರು. ತಮ್ಮ ವೈದ್ಯಕೀಯ ಪವಾಡಗಳನ್ನು ವಿವರಿಸಿದರು. ಹಚ್ಚಿಕೊಳ್ಳಲು ಒಂದು ಲೇಹ್ಯ ಕೊಟ್ಟರು. ಸ್ವಲ್ಪ ಸಮಾಧಾನದಿಂದ ಮನೆಗೆ ಬಂದ ಬಸಲಿಂಗನಿಗೆ ಹಲವು ದಿನ ಲೇಹ್ಯ ಹಚ್ಚಿಕೊಂಡು ವೈದ್ಯರು ಹೇಳಿದಂತೆ ಬಟ್ಟೆಯ ಕಾವು, ಉಪ್ಪಿನ ಕಾವು ಕೊಟ್ಟುಕೊಂಡ. ಆದರೆ ಕಣ್ಣಿನ ನೋವು ಮತ್ತು ಮಂದಸ್ಥಿತಿ ಕಡಿಮೆಯಾಗಲಿಲ್ಲ. ಹಾಗೆಂದು ಹೇಳಿದರೆ ಹೆಂಡತಿ ಸಿದ್ಲಿಂಗಿ ನಂಬಲಿಲ್ಲ. ಅದು ಆತನ ಕಲ್ಪನೆ ಎಂಬಂತೆ ಮಾಡಾಡಿದಳು. ಬಸಲಿಂಗನಿಗೆ ಸಿಟ್ಟು ಬಂತು. ಒಂದು ರೀತಿಯ ಅಸಹಾಯಕತೆ ಶುರುವಾಯಿತು. ನೋವನ್ನು ಸುಮ್ಮನೆ ವಿವರಿಸದೆ ಕೆಲವರಲ್ಲಿ. ತನ್ನ ಕಷ್ಟ ತೋಡಿಕೊಂಡ. ಉಳಿದಿರುವ ನೆಲ, ಮಗುವಿನ ಕಾಯಿಲೆ ಎಲ್ಲವೂ ಅವನಿಗೆ ಗೌಣವಾಗಿ ಕಾಣತೊಡಗಿದ್ದವು. ಯಾರೋ ಒಬ್ಬರು ಸರ್ಕಾರಿ ಆಸ್ಪತ್ರೆಯ ಡಾಕ್ಟರ್ ತಿಮ್ಮಪ್ಪನಿಗೆ ತೋರಿಸಲು ಹೇಳಿದರು. ಸರ್ಕಾರಿ ಆಸ್ಪತ್ರೆ ಅಂದರೆ ದಿಕ್ಕು ದಿವಾಳಿ ಇಲ್ಲದವರು ಹೋಗುವ ಜಾಗ ಎಂದು ತಿಳಿದಿದ್ದ ಅವನಿಗೆ ಇದು ಕೊನೆಯ ಪ್ರಯತ್ನವಾಗಿ ಕಾಣಿಸಿತು. ಆದರೆ ಅವನಿಗೆ ತಿಮ್ಮಪ್ಪನ ಬಗ್ಗೆ ಹೇಳಿದ್ದವರು ಧೈರ್ಯ ತುಂಬಿದರು. ಖಾಸಗಿ ವೈದ್ಯರು ಕೂಡ ಎಷ್ಟು ಕೆಟ್ಟವರೆಂದು ವಿವರಿಸಿದರು.

ಡಾ॥ ತಿಮ್ಮಪ್ಪ ಬಿಡುವಿಲ್ಲದ ವೈದ್ಯರು. ಅವರ ಆಸ್ಪತ್ರೆಯಲ್ಲಿ ಹತ್ತಾರು ಜನ ಸಾಲುಗಟ್ಟಿ ನಿಂತಿದ್ದರು. ಎಲ್ಲರೂ ಬಡವರು, ಬಸಲಿಂಗ ಕಾಯುತ್ತಾ ಕೂತ. ಅವನ ಸರದಿ ಬಂದಾಗ ತಿಮ್ಮಪ್ಪನವರ ಎದುರು ನಿಂತ ಒಟ್ಟಿಗೇ ತನ್ನ ಕಷ್ಟಗಳನ್ನು ತೋಡಿಕೊಂಡ. ತನ್ನ ಮಲಗುವ ಎತ್ತುಗಳಂದ ಹಿಡಿದು ತನ್ನ ನೋವು, ತನ್ನ ನಿದ್ರೆ, ನೆಮ್ಮದಿಯನ್ನೆಲ್ಲ ಕೆಡಿಸಿರುವುದನ್ನು ಹೇಳಿದ. ತಿಮ್ಮಪ್ಪ ಅವನನ್ನು ಪರೀಕ್ಷಿಸಿದರು. ಸೂಟಿಯಾದ ಬೆರಳುಗಳ, ವಿಶ್ವಾಸ ತುಂಬಿದ ಮಾತುಗಳ ಡಾಕ್ಟರು, ಬಸಲಿಂಗನ ದೃಷ್ಟಿಯ ಅಳತೆ, ಸ್ಪಷ್ಟತೆಯನ್ನು ನೋಡಿದರು; ನೋವಿನ ಕಾರಣಕ್ಕಾಗಿ ಹುಡುಕಿದರು. ಕೊನೆಗೆ ಹೇಳಿದರು; "ನಿನ್ನ ಕಣ್ಣು ಸರಿಹೋಗುತ್ತೆ, ಆದರೆ ಆಪರೇಷನ್ ಆಗಬೇಕು, ಪರವಾಗಿಲ್ಲವಾ?"

ಖಂಡಿತ ಸರಿಹೋಗುತ್ತಾ ಎಂಬಂತೆ ಬಸಲಿಂಗ ನೋಡಿದ.

ತಿಮ್ಮಪ್ಪ ವಿಶ್ವಾಸದಿಂದ ಮಾತಾಡಿದರು. ಬಸಲಿಂಗನಿಗೆ ಇದನ್ನೂ ತನ್ನ ಮನಸ್ಸಿನಲ್ಲಿಯೇ ಇಟ್ಟುಕೊಂಡ ಸಿದ್ಲಿಂಗಿ ಕೇಳಿದಾಗ ಡಾಕ್ಟರು ಹೆಸರನ್ನು ಮಾತ್ರ ಹೇಳಿದ. ವಿವರಗಳನ್ನು ತಿಳಿಸುವ ಉತ್ಸಾಹ ಅವನಲ್ಲಿರಲಿಲ್ಲ. ಮರುದಿನ ಹಕ್ಕೆ, ಹಿತ್ತಿಲು, ನೀರುನಿಡಿಯ ಕೆಲಸವನ್ನೆಲ್ಲ ಮುಗಿಸಿ ಆಸ್ಪತ್ರೆಗೆ ಹೊರಟ. ತಿಮ್ಮಪ್ಪ ಎಷ್ಟು ಒಳ್ಳೆಯವರೆಂದರೆ ಅವರು ಅವನಿಗಾಗಿ ಕಾಯುತ್ತಿದ್ದಂತಿತ್ತು. ಬಸಲಿಂಗನಲ್ಲಿ ಅವರಿಗೆ ವಿಶೇಷ ಆಸಕ್ತಿ, ಪ್ರೀತಿ ಮೂಡಿದ್ದವು. ಅವನ ಹೊಲ, ಎತ್ತು, ಮಗು ಕೂಡ ಅವರಲ್ಲಿ ನಿಂತಿದ್ದವು. ಅನುಭವಿ ವೈದ್ಯರಾದ ತಿಮ್ಮಪ್ಪ ಬಸಲಿಂಗನನ್ನು ಆಪರೇಷನ್‌ಗೆ ಸಿದ್ಧಗೊಳಿಸಿ ಕೆಲವೇ ನಿಮಿಷಗಳಲ್ಲಿ ಆಪರೇಷನ್ ಮುಗಿಸಿದರು. ಅವನ ಕೈ ಹಿಡಿದುಕೊಂಡು ಹೇಳಿದರು, ನೋಡು, ಇದು ಸೂಕ್ಷ್ಮವಾದ ಶಸ್ತ್ರಚಿಕಿತ್ಸೆ, ನೀನು ಎರಡುವಾರ ತಲೆಗೆ ನೀರನ್ನು ಸೋಂಕಿಸಬಾರದು. ನೀರು ಬಿದ್ದರೆ ಕಣ್ಣು ಕೆಟ್ಟುಹೋಗುವ ಅಪಾಯ ಇದೆ. ಇದನ್ನು ಸರಿಯಾಗಿ ನೆನಪಿಟ್ಟುಕೋ.

ಬಸಲಿಂಗನಲ್ಲೂ ತಿಮ್ಮಪ್ಪನವರ ಬಗ್ಗೆ ವಿಚಿತ್ರ ಪ್ರೀತಿ ಬೆಳೆದಿತ್ತು. ಆದರೆ ಅವನು ಮನೆಗೆ ಹೋದ ಮೇಲೆ ಸಿದ್ಲಿಂಗಿ ದೊಡ್ಡ ರಾದ್ಧಾಂತವನ್ನೇ ಎಬ್ಬಿಸಿದಳು. ಆಕೆಗೆ ಅದು ಹೇಗೋ ತಿಮ್ಮಪ್ಪ ಹೊಲೆಯರೆಂಬುದು ಗೊತ್ತಾಗಿತ್ತು. ತನಗೆ ಗೊತ್ತಿಲ್ಲದ ವಿಷಯ ಆಕೆಗೆ ಹೇಗೆ ತಿಳಿಯಿತೆಂದು ಬೆರಗಾದ ತನ್ನ ತಿಮ್ಮಪ್ಪನ ನಡುವಿನ ಸಂಬಂಧ ಅವನಿಗೆ ಬೇರೆ ಎರಕದಲ್ಲಿ ಹೊಯ್ದಂತೆ ಕಾಣಿಸಿಕೊಳ್ಳತೊಡಗಿತು. ತನ್ನನ್ನು ಮುಟ್ಟುವ ಮುನ್ನ ಅವರು ತಮ್ಮ ಜಾತಿಯ ಬಗ್ಗೆ ಒಂದು ಮಾತು ಹೇಳಿದ್ದರೆ ಒಳ್ಳೆಯದಿತ್ತೆಂದು ಕ್ಷಣ ಅನ್ನಿಸಿತು. ಆದರೆ ಅಂಥ ಯೋಚನೆ ಕೆಟ್ಟದೆಂದು ಬೈದುಕೊಂಡ. ತನ್ನ ಆಳ್ತನದಲ್ಲಿ ಏನೋ ಕಮ್ಮಿಯಾದಂತೆ ಬಸಲಿಂಗನಿಗೆ ಅನ್ನಿಸಿತು. ಇದರಿಂದ ನೊಂದುಕೊಂಡ. ಈ ವಿಷಯವನ್ನು ಯಾರಿಗೂ ಹೇಳಕೊಡದೆಂದು ತೀರ್ಮಾನಿಸಿದ. ಸಿದ್ಲಿಂಗಿ ಕೂಡ ಇದನ್ನು ಒಪ್ಪಿದಳು. ಸೂತಕವನ್ನು ಪರಿಹರಿಸಲು ಬಸಲಿಂಗ ಮೈ ತೊಳೆದುಕೊಳ್ಳಬೇಕು. ತಿಮ್ಮಪ್ಪನವರ ಹಿತವಚನವನ್ನು ಮರೆಯದಿದ್ದರೂ ಅದು ಅಸ್ಪಷ್ಟವಾಗತೊಡಗಿತ್ತು. ಸಿದ್ಲಿಂಗಿ ಅವನಿಗೆ ಕಣ್ಣು ಮಾತ್ರ ನೆನೆಯದಂತೆ ಬಿಸಿ ಬಿಸಿ ನೀರು ಹೊಯ್ದು ಸ್ನಾನ ಮಾಡಿಸಿದಳು.

ಮನಸ್ಸು ಹಗುರಾದರೂ ಪಟ್ಟುಗಳಲ್ಲಿ ಭದ್ರವಾಗಿದ್ದ ಎಡಗಣ್ಣು ಎರಡು ದಿನ ನೋವಿನಿಂದ ಮುಕ್ತವಾಗಿದ್ದು ಮೂರನೆಯ ದಿನದಿಂದ ತುಡಿಯತೊಡಗಿತು. ಮತ್ತೆ ನೋವು ಶುರುವಾಯಿತು. ಈಗ ಬಸಲಿಂಗ ಇಕ್ಕಟ್ಟಿಗೆ, ಪಶ್ಚಾತಾಪಕ್ಕೆ ಸಿಕ್ಕಿಹಾಕಿಕೊಂಡ, ಸುಳ್ಳು ಹೇಳಲಾರದ ಬಸಲಿಂಗ ಒಂದು ವಾರದೊಳಗೆ ತಿಮ್ಮಪ್ಪನವರನ್ನು ಬಿಟ್ಟು ಬೇರೆಲ್ಲ ಡಾಕ್ಟರುಗಳಿಗೆ ತನ್ನ ಕಣ್ಣು ತೋರತೊಡಗಿದ. ಆದದ್ದು ಹೇಳಿದ. ಅವರು ನೀಡಿದ ಸಲಹೆ, ಔಷಧಿ ಸರಿಹೋಗಳೇ ಇಲ್ಲ. ಬೇರೆ ದಾರಿ ಕಾಣದೆ ತಿಮ್ಮಪ್ಪನವರ ಬಳಿಗೇ ಹೋದ. ಅವರು ಅವನನ್ನು ಪ್ರೀತಿಯಿಂದಲೇ ಪ್ರಶ್ನೆ ಕೇಳತೊಡಗಿದರು. ಬಸಲಿಂಗ ಉತ್ತರಿಸದ. ತಾನು ತನ್ನ ತಲೆಗೆ ನೀರನ್ನು ಸೋಂಕಿಸಿಯೇ ಇಲ್ಲ ಎಂದು ಸುಳ್ಳು ಹೇಳಿದ. ಅವನು ನಡುಗುತ್ತಿರುವುದನ್ನು ನೋಡಿ ತಿಮ್ಮಪ್ಪ ತಮಗನ್ನಿಸಿದ್ದನ್ನು ಹೇಳಿದರು. ತನ್ನ ಸುಳ್ಳು ಡಾಕ್ಟರಿಗೆ ಗೊತ್ತಾಗಿರುವುದನ್ನು ಕಂಡ ಬಸಲಿಂಗ ಇನ್ನೂ ತಬ್ಬಿಬ್ಬಾದ.

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

4. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ. [25]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

"Work is not cause; it is the prerogative of intelligence, the only means to manhood, and the measure of civilization," – Calvin Collorid.

Work is indeed God's gift. Without it life will become meaningless, flat, a veritable nothingness. Work, here does not stand for very sort of activity. Only useful and noble activity is blessed. Negative action is a curse. Work of Carly'es conception, who is the author of the saying in question, is something positive and constructive, howsoever low or mean it may be in the eyes of the public. The sweeper's work is as much sacred as that of either a lawyer or a lecturer. Joseph Conrad rightly remarked "A man is a worker. If he is not, he is nothing." In fact, a man cannot live without work. William Morris demanded two things only: love and work. Great men believe in work, hard work and long hours of work.

## SECTION - B / ವಿಭಾಗ – B

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

**ಪತ್ರ ಲೇಖನ / Letter Writing** **[10]**

5. ಈ ಕೆಳಗಿನ ವಿಷಯವನ್ನು ಕುರಿತು 100 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.

**ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ**

**ವಿಶೇಷ ಸೂಚನೆ :**

**(ಗೆ, ವಿಳಾಸ – ಸಂಪಾದಕರು, ಭಾರತ ಟೈಮ್ಸ್, ನವದೆಹಲಿ ಇವರಿಗೆ ಮತ್ತು**

**ನೀವು ABC ಎಂದು ಪರಿಭಾವಿಸಿಕೊಂಡು, ವಿಳಾಸ – XXX ಸಂಖ್ಯೆ 1, YYY ರಸ್ತೆ, ZZZ – ಸ್ಥಳ) –** ಕಾಲ್ಪನಿಕವಾಗಿ ನೀಡಲಾಗಿರುವ ಈ ಮೇಲಿನ ವಿಳಾಸವನ್ನಷ್ಟೇ ಬಳಸಿ ಪತ್ರ ಬರೆಯಲು ಸೂಚಿಸಿದೆ. ಇದರ ಹೊರತಾಗಿ ಬೇರೆ ಯಾವುದೇ ಹೆಸರನ್ನಾಗಲೀ, ವಿಳಾಸವನ್ನಾಗಲೀ, ಸಹಿಯನ್ನಾಗಲೀ ಪತ್ರ ಲೇಖನದಲ್ಲಿ ಬರೆಯಬಾರದು. ಈ ರೀತಿಯ ಯಾವುದೇ ನಮೂದು ಬರೆದಲ್ಲಿ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು ಮತ್ತು "ದುರಾಚಾರ ಪ್ರಕರಣ" ಎಂದು ಪರಿಗಣಿಸಿ ಅಭ್ಯರ್ಥಿತ್ವವನ್ನು ರದ್ದುಗೊಳಿಸುವುದಲ್ಲದೆ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಅಭ್ಯರ್ಥಿಯು ಒಳಗಾಗಬೇಕಾಗುತ್ತದೆ.)

6. ಈ ಕೆಳಗಿನವುಗಳಿಗೆ ಅರ್ಥಸ್ವಾರಸ್ಯವನ್ನು ವಿವರಿಸಿ. [2 × 5 = 10]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

(a) ನೀತಿಯು ಜಾತಿಗಿಂತ ಶ್ರೇಷ್ಠ

ಉತ್ತರ:

(b) ಹಿತ್ತಲ ಗಿಡ ಮದ್ದಲ್ಲ

ಉತ್ತರ:

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

**To be used by the Evaluator only**

7. ಈ ಕೆಳಗಿನ ನುಡಿಗಟ್ಟುಗಳ ಅರ್ಥ ವಿವರಿಸಿ. ಅವುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ. [2 × 3 = 6]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

**(a)** ತಲೆ ಮೇಲೆ ಚಪ್ಪಡಿ ಎಳೆ

**ಉತ್ತರ :**

**(b)** ಮೈಗೆ ಹತ್ತು

**ಉತ್ತರ :**

8. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. [4 × 1 = 4]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

(a) ಸಾಹಸ ಭೀಮ ವಿಜಯ ಅಥವಾ ಗದಾಯುದ್ಧ ಯಾರ ಕೃತಿ?

ಉತ್ತರ :

(b) ಜೈಮಿನಿ ಭಾರತ ಯಾವ ಷಟ್ಪದಿಯಲ್ಲಿದೆ?

ಉತ್ತರ :

(c) ಅಕ್ಕಮಹಾದೇವಿಯ ವಚನಗಳ ಅಂಕಿತವೇನು?

ಉತ್ತರ :

(d) ಪುರಂದರ ದಾಸರ ಪೂರ್ವಾಶ್ರಮದ ಹೆಸರೇನು?

ಉತ್ತರ :

9. ಈ ಕೆಳಗಿನವುಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ : [1 × 5 = 5]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(a) ಮೃಗ
ಉತ್ತರ :

(b) ಬೇಸಗೆ
ಉತ್ತರ :

(c) ಬೊಮ್ಮ
ಉತ್ತರ :

(d) ಅಂಚೆ
ಉತ್ತರ :

(e) ಕಜ್ಜ
ಉತ್ತರ :

10. ಈ ಕೆಳಗಿನವುಗಳನ್ನು ಬಿಡಿಸಿ ಬರೆಯಿರಿ. [1 × 5 = 5]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

(a) ಚಂದ್ರಾಯುಧ

ಉತ್ತರ :

(b) ಗಿಡವನ್ನು

ಉತ್ತರ :

(c) ಕಲ್ಮರ

ಉತ್ತರ :

(d) ಜಗಜ್ಜನನಿ

ಉತ್ತರ :

(e) ಜಲಾಂಜಲಿ

ಉತ್ತರ :

11. ಈ ಕೆಳಗಿನವುಗಳಿಗೆ ಅರ್ಥ ಬರೆಯಿರಿ. [1 × 5 = 5]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

(a) ಕಡಲು

ಉತ್ತರ :

(b) ತೃಷೆ

ಉತ್ತರ :

(c) ಅನಲ

ಉತ್ತರ :

(d) ಇನ

ಉತ್ತರ :

(e) ಮಾಹೆ

ಉತ್ತರ :

12. ಈ ಕೆಳಗಿನವುಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ. [1 × 5 = 5]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

(a) ಸುಗಂಧ

ಉತ್ತರ :

(b) ನೆರಳು

ಉತ್ತರ :

(c) ಸಹ್ಯ

ಉತ್ತರ :

(d) ಆದಾಯ

ಉತ್ತರ :

(e) ದುರ್ಬಲ

ಉತ್ತರ :